ಒಗ್ಗಿ (ಹೆಂಗರುಳ ಪುರುಷರನ್ನೂ ಸೇರಿಸಿ) ಕೇಳುಗರೆಲ್ಲರ ಕಣ್ಣು ಒದ್ದೆ ಮಾಡುವ ಶಕ್ತಿ ಎಷ್ಟು ಕವನಗಳಿವೆ? ಇದು ಅಂತಹದೊಂದು ಅಪರೂಪದ ಕವನ. 'ಮನೆ ತುಂಬಿಸುವ ಹಾಡು'. ಹೆಣ್ಣಿಕವಿ ನಮ್ಮ ವಿಸೀ ಅವರದು. **'ಎಮ್ಮ ಮನೆಯಂಗಳದಿ ಬೆಳೆದೊಂದು ಹೂವನ್ನು', 'ನಮ್ಮ ಮನೆ ಬೆಳಕನ್ನು'** ಎಂಬ ಸಾಲೊಂದೇ ಸಾಕು ಇದರ ಪುರಾವೆಗೆ. ಹೆಣ್ಣುಮಕ್ಕಳ ಮೇಲೆ ಕವಿಗಿರುವ ಪ್ರೀತಿಗಾಢತೆ, ಆತ ಅವರಿಗಿತ್ತ ಸ್ಥಾನ ಈ ಸಾಲುಗಳ ಮೂಲಕ ಕೇಳುಗರ ಹೃದಯಕದ ತೆರೆವ ಮಾರ್ದವತೆ ಬೇರೆಯೇ.

ಇಷ್ಟಾಗಿ ನಾನು ಮದುವೆಯ ಹಾಡುಗಳು, ಶೋಭಾನೆಗಳು ಚಪ್ಪರದ ತುಂಬಾ ಮೊಳಗುತ್ತಿದ್ದ ದಿನಗಳಿಂದ ಬಂದವಳು. ಮಹಿಳೆಯರೇ ಕಟ್ಟಿದ ಹಸೆಗೆ ಕರೆವ ಹಾಡು, ಮಾಲೆ ಹಾಕುವ ಹಾಡು, ದೂರು ಹಾಡುಗಳೇ ಮುಂತಾದವುಗಳನ್ನು ಅಸಂಖ್ಯ ಉದ್ದಕ್ಕೂ ಕೇಳಿದ್ದೇ ಹೊರತು ಹುಡುಗಿಯನ್ನು ಕಳಿಸುವ ಅಥವಾ ಮನೆತುಂಬಿಸುವ ಹಾಡುಗಳು ಕಿವಿಮೇಲೆ ಬಿದ್ದದ್ದು ಅಪರೂಪ. ಅದುವರೆಗೂ ಪುರುಷನೊಬ್ಬ 'ಹೆತ್ತವರ ಮನೆಗೆ ಹೊರಗಾ'ಗುವ ಹೆಣ್ಣನ್ನು ಕುರಿತು ಈ ಪರಿಯಾಗಿ ಮಿಡಿದು ಬರೆದ ಕವನವಂತೂ ಇಲ್ಲವೇ ಇಲ್ಲವೇನೋ. ವಿಸೀಯವರೇ ಮೊದಲಿಗರು ಎನ್ನಬೇಕು. ಎಂತಲೇ ನನ್ನ ತಲೆಮಾರಿನ ಮಹಿಳೆಯರಿಗೆ ವಿಸೀ ಮತ್ತು ಅವರ ಈ ಕವನವೆಂದರೆ ಭಯಂಕರ ಅಪನಾಪನ್.

ಹೂವಿನಂತೆ ಬೆಳೆಸಿದ ಮನೆಮಗಳು ವಾಸ್ತವವಾಗಿ ಇನ್ನಾರದೋ ಮನೆಯವಳು ಎಂಬ ಕಟುಕಷಾಯವನ್ನು ನುಂಗಲಾರದೆ ನುಂಗಿ ಹರಸಿ ಅವಳನ್ನು ತವರಿನ ಹೊಸಿಲು ದಾಟಿಸಿ ಪತಿಗೃಹದ ಹೊಸಿಲೊಳಗೆ ಕರೆತಂದು ಬೀಳ್ಕೊಡುವ ಹೊತ್ತಿನಲ್ಲಿ ತಂದೆಯಾದವನ 'ಸು-ಖೇದಾಶ್ರು' ತುಂಬಿ ಹರಿಯುವ ಕವನವದು. ತಂದೆಯ ಮಾತ್ರವಲ್ಲ, ತಾಯಿಯ ಕವನವೂ ಎಂಬಷ್ಟು ಹೃದ್ಯವಾಗಿರುವ ಕಾರಣವೋ ಏನೋ ನಾವು ಇಂದಿಗೂ ಅದನ್ನು ಕಾಪಾಡಿಕೊಂಡು ಬಂದಿಹೆವು.

ಈ ಪದ್ಯವನ್ನು ಎಷ್ಟೊತ್ತಿಗೆ ಕೇಳಿದರೂ, ಇವತ್ತಿಗೂ, ವಿಶೇಷವಾಗಿ, ಹೆಣ್ಣು ಹೆತ್ತವರಿಗೆ ಕಣ್ತುಂಬಿ ಬರುತ್ತದೆ. ಕೇವಲ ಭಾವಾತಿರೇಕದಿಂದ ಅಲ್ಲ. ಹೆಣ್ಣುಮಗುವನ್ನು ಸಾಕಿ, ಸಲಹಿ ಕೊನೆಗೆ ಅನಿವಾರ್ಯವಾಗಿ ಇನ್ನೊಂದು ಮನೆಗೆ ಕಳಿಸಿಕೊಡುವ, ಕಳಿಸಿಕೊಡದೆಯೂ ಇರಲಾರದ ವಿಚಿತ್ರ ಪರಿಸ್ಥಿತಿಯ ದರ್ಶನದಿಂದ.

ಹಿಂದೆಲ್ಲ ಮನೆಯಂಗಳದಲ್ಲಿಯೇ ಚಪ್ಪರ ಹಾಕಿ ಮದುವೆ- ಮುಂಜಿ ನಡೆಸುತಿದ್ದರಷ್ಟೆ. ನನ್ನ ಮದುವೆಯವರೆಗೂ ನಮ್ಮನೆಯಲ್ಲಿ ಮನೆಯೆದುರಿನ ಅಂಗಳದಲ್ಲಿ ಮದುವೆ ಚಪ್ಪರ ಎದ್ದಿತ್ತು. ಮುಂದೆ ಕಾಲಕ್ಕೆ ತಕ್ಕಂತೆ ಅದು ಕಲ್ಯಾಣಮಂಟಪಕ್ಕೆ ದಾಟಿಕೊಂಡಿತು, ಅಕ್ಕಂದಿರ ಮದುವೆಯಾದಾಗ ಮನೆಯ ಉಳಿದ ಹೆಣ್ಣುಮಕ್ಕಳು ಈ ಕವನವನ್ನು ಹಾಡಿಯೇ ಕಳಿಸುವುದು ನಮಗೆ ರೂಢಿಯೇ ಆಗಿಬಿಟ್ಟಿತ್ತು. 'ಮನೆತುಂಬಿಸುವ ಹಾಡಾ'ಗಿ ಅಲ್ಲ, 'ಮದುಮಗಳನ್ನು ಕಳಿಸಿಕೊಡುವ ಹಾಡು' ಎಂಬ ಹೆಸರಿನಲ್ಲಿ ಅದು ನಮ್ಮ ನಡುವೆ ಸಂಚರಿಸುತ್ತಿತ್ತು. ಯಾರೇ ಆಗಲಿ 'ಹಾಡಿ' ಅಂದ ತಕ್ಷಣ ಒಂಚೂರೂ ಹಿಂದೆಮುಂದೆ ನೋಡದೇ ಹಾಡುತ್ತಿದ್ದ ನಾವು, 'ಮದುಮಗಳು ಹೊರಡುತ್ತಿದ್ದಾಳೆ, ಆ ಪದ್ಯ ಹಾಡಿ ಮಕ್ಕಳೇ' ಎಂದರೆ ಸೈ, ಕ್ಷಣದಂಡ ಮಾಡದೆ ಬಾಯಿ ತೆರೆದು 'ಎಮ್ಮ ಮನೆಯಂಗಳದಿ...' ಸುರುಮಾಡುತ್ತಿದ್ದೆವು. ಮದುಮಗಳೇನು ನಮ್ಮ ಮನೆಯಂಗಳದಿ ಅರಳಿದ ಹೂವೇ ಆಗಬೇಕಂತಿರಲಿಲ್ಲ. ಬಂಧು- ಬಾಂಧವರ ಮನೆಯಂಗಳದಲ್ಲಿ ಅರಳಿದವಳಾದರೂ ಸರಿಯೇ.

ನನ್ನ ಇಂದಿರಕ್ಕ ನಮಗೆಲ್ಲ ಹಾಡು ಹೇಳಿಕೊಟ್ಟು ತರಬೇತಿ ಮಾಡುತಿದ್ದ ಹೀರೊಯಿನ್. ಅವಳ ಮದುವೆಯಾಗುವಾಗ ನಾವು ತಂಗಿಯರು ಇನ್ನೂ ಚಿಕ್ಕವರು. ಮದುವೆ ಕಾರ್ಯಕ್ರಮಗಳೆಲ್ಲ ಮುಗಿದು ವರನ ದಿಬ್ಬಣ ಅವಳನ್ನು ತಮ್ಮ

